(*b*) Yes. Investigation and preliminary survey works are in progress;

(*c*) Yes; action has taken to provide better accommodation facilities to the tourists visiting Magod Falls and Lushington Falls in the North Kanara District. Improvements to the Roads, laying out of gardens in front of the tourist Rest Houses are proposed to be taken up in due course. These places will be publicised and suitably spotlighted by releasing advertisements in leading papers and magazines and circulating folders, etc.

ಶ್ರೀ ಎಸ್. ಪಿ. ಫಾಯದೆ.—ಸ್ವಾಮೀ, ಮಾಗೋಡದಲ್ಲಿ ಪ್ರವಾಸಿ ಮಂದಿರ ತಯಾರಾಗಿದೆ. ಅಲ್ಲಿ ಹೋಗಲು ರಸ್ತೆ ಇಲ್ಲವಾಗಿದೆ. ಈ ರಸ್ತೆಯ ಕೆಲಸವನ್ನು ಆದಷ್ಟು ತೀವ್ರವಾಗಿ ತೆಗೆದು ಕೊಳ್ಳುತ್ತಾರೆಯೇ ?

ಶ್ರೀ ಜಿ. ಬಿ. ಶಂಕರ್ ರಾವ್.—ಜೀಪ್ ಹೋಗುವುದಕ್ಕೆ ಒಳ್ಳೆಯ ದಾರಿ ಇದೆ. ಸಾಮಾನ್ಯವಾಗಿ ವರ್ಷದ 12 ತಿಂಗಳೂ ಅಲ್ಲಿಯವರೆಗೆ ಹೋಗಲು ಅನುಕೂಲವಾದ ಮಾರ್ಗವಿದೆ.

ಶ್ರೀ ಎಸ್. ಪಿ. ಫಾಯದೆ.—ಸ್ವಾಮಿ, ಪ್ರವಾಸಿ ಮಂದಿರವು ಮಾಗೋಡಿನಲ್ಲಿ ಮಾತ್ರ ಇದೆ. ಬಾಕಿ ಎರಡರಲ್ಲೂ ಪ್ರವಾಸಿ ಮಂದಿರ ಮಾಡುವುದರಿಂದ ಪ್ರವಾಸಿಕರಿಗೆ ಸೌಲಭ್ಯ ಒದಗಿಸಿದಂತಾಗುವುದಿಲ್ಲವೇ ? ಮೂರು ಜಲಪಾತಗಳು ಒಂದೇ ತಾಲ್ಲೂಕಿನಲ್ಲಿ ಇದೆ. ಮಾಗೋಡ್ ಜಲಪಾತಕ್ಕೆ ಪ್ರವಾಸಿ ಮಂದಿರ ಮಾತ್ರ ಮಾಡಿದ್ದೀರಿ. ಬಾಕಿ ಎರಡಕ್ಕೆ ಕೂಡಾ ಮಾಡಿದರೆ ಪ್ರವಾಸಿಗರಿಗೆ ಅನುಕೂಲವಾಗುವುದಿಲ್ಲವೇ ?

ಶ್ರೀ ಜಿ. ಬಿ. ಶಂಕರ್ ರಾವ್.—ಲೂಷಿಂಗ್‌ಟನ್‌ನಲ್ಲಿ ಪ್ರವಾಸಿ ಮಂದಿರ ಆಗಬೇಕಾಗಿದೆ. ಅದಕ್ಕೆ 84 ಸಾವಿರ ರೂಪಾಯಿಗಳ ಅಂದಾಜು ತಯಾರಾಗಿದೆ.

Sri R. S. HEGDE.—Are there any proposal before the Government to harness water in these falls for power ?

Sri G. B. SHANKAR RAO.—There are no proposals to harness water of these rivers for power development.

ಶ್ರೀ ಎಸ್. ಪಿ. ಫಾಯದೆ.—ಸ್ವಾಮಿ, ಈ ಜಲಪಾತಗಳ ಎತ್ತರವೆಷ್ಟು ?

ಶ್ರೀ ಜಿ. ಬಿ. ಶಂಕರ್ ರಾವ್.—ಮಾಗೋಡ್ ನುಮಾರು 600 ಅಡಿ ಎತ್ತರ ಲೂಷಿಂಗ್‌ಟನ್ ಜಲಪಾತ ಎಷ್ಟು ಅಡಿ ಎತ್ತರ ಎಂದು ಗೊತ್ತಿಲ್ಲ.

Sri R. S. HEGDE.—Has it come to the notice of the Government that repeated representations were made to almost all the Ministers who toured Honnavar and Bhatkal that there are facilities for generating power at Ramathirtha, Gokarna and Murudeswar ?

Sri G. B. SHANKAR RAO.—So far, we are not aware of any representation.

Hemavathi Project.

*Q—213. Sri K. P. REVANASIDDAPPA (Tiptur).—

Will the Government be pleased to state :—

(*a*) when the investigation of Hemavathi Project was started ;

(*b*) whether this project has secured the technical clearnce from the Central Water and Power Commission ;

(*c*) what is the progress made (with the cost so far incurred) in connection with the execution of projects ; regarding establishment, preliminary buildings and works ;

(*d*) what is the time required to complete the project ?

4.—Sri S. NIJALINGAPPA (Chief Minister).—

(*a*) During 1960.
(*b*) No.
(*c*) Establishment ... Nil
Buildings ... Rs. 1,171
Works ... Rs. 84,436

Total ... 85,607

(*d*) About five years subject to availability of adequate funds.

ಶ್ರೀ ಕೆ. ಪಿ. ರೇವಣಸಿದ್ದಪ್ಪ.—ಸಿಬ್ಬಂದಿ ವರ್ಗದ ಬಗ್ಗೆ ಏನೂ ಖರ್ಚುಮಾಡಿಲ್ಲವೆಂದು ಹೇಳಿದ್ದೀರಿ. ಇಲ್ಲಿ ಎಕ್ಸಿಕ್ಯೂಟಿವ್ ಇಂಜಿನಿಯರು, ಅಸಿಸ್ಟೆಂಟ್ ಇಂಜಿನಿಯರು ಮತ್ತು ಅಧಿಕಾರಿ ವರ್ಗದ ವರಿಗೆ ಯಾರು ಸಂಬಳ ಕೊಡುತ್ತಾರೆ ?

ಶ್ರೀ ಎಸ್. ನಿಜಲಿಂಗಪ್ಪ.—ಅದಕ್ಕಾಗಿ ಸ್ಪೆಶಲ್ ಡಿವಿಜನ್ ಕ್ರಿಯೇಟ್ ಮಾಡಿಲ್ಲ.

ಶ್ರೀ ಕೆ. ಪಿ. ರೇವಣಸಿದ್ದಪ್ಪ.—ಹೇಮಾವತಿ ಯೋಜನಾ ಪರಿಶೀಲನಾ ಕಾರ್ಯ ಯಾವಾಗ ಪ್ರಾರಂಭವಾಯ್ತು ಎಂದು ಕೇಳಿದ್ದಕ್ಕೆ 1960ರಲ್ಲಿ ಎಂದು ಹೇಳಿದ್ದೀರಿ. ಹಿಂದೆ 1925ರಲ್ಲಿ ಪರಿಕೀಯರ ಸರ್ಕಾರ ಇತ್ತು, ಆಗಲೇ ಸರ್ವೆ ಆಗಿತ್ತು. ಅದು ಸರಿಯಾಗಿರಲಿಲ್ಲವೇ ?

ಶ್ರೀ ಎಸ್. ನಿಜಲಿಂಗಪ್ಪ.—ಹಿಂದೆ ಆದದ್ದು ನನಗೆ ಗೊತ್ತಿಲ್ಲ. ಪರಕೀಯರ ಸಮಯದಲ್ಲಿ ಆದದ್ದು ನನಗೆ ತಿಳಿಯದು.

ಶ್ರೀ ಕೆ. ಪಿ. ರೇವಣಸಿದ್ದಪ್ಪ.—ಹಿಂದೆ ಹಣ ಖರ್ಚು ಮಾಡಿ ಚನ್ನರಾಯಪಟ್ಟಣ, ತಿಪಟೂರು ತಾಲ್ಲೂಕು ಬೋರ್ಡ್‌ನಿಂದ ಸರ್ವೆ ಆಗಿತ್ತು. ಆ ದಾಖಲೆಗಳನ್ನು ತೆಗೆಸುವುದಕ್ಕೆ ಪ್ರಯತ್ನ ಮಾಡುತ್ತೀರಾ ?

ಶ್ರೀ ಎಸ್. ನಿಜಲಿಂಗಪ್ಪ.—ನನಗೆ ಗೊತ್ತಿರುವ ಹಾಗೆ ಹಿಂದೆ ಆದದ್ದು ಯಾವುದೂ ಇಲ್ಲ.

ಶ್ರೀ ಎಸ್. ಎಮ್. ಕೃಷ್ಣ.—ಒಟ್ಟು ಪ್ರಾಜೆಕ್ಟಿಗೆ ಎಷ್ಟು ಖರ್ಚಾಗುತ್ತದೆ ಎಂದು ಅಂದಾಜು ಮಾಡಲಾಗಿದೆ ?

ಶ್ರೀ ಎಸ್. ನಿಜಲಿಂಗಪ್ಪ.—ಇದರಲ್ಲಿ ಎರಡು ಭಾಗ ಮಾಡಿದೆ. ಮೊದಲನೆಯದು 16 ಕೋಟಿ 30 ಲಕ್ಷ. ಎರಡನೆಯದು ಸುಮಾರು 6 ಕೋಟಿ ರೂಪಾಯಿ.

ಶ್ರೀ ಎಸ್. ಎಮ್. ಕೃಷ್ಣ.—ಸೆಂಟ್ರಲ್ ಗೌರ್ನಮೆಂಟ್ ಪವರ್ ಮತ್ತು ವಾಟರ್ ಕಮಿಶನಿಂದ ಇದಕ್ಕೆ ಇನ್ನೂ ಟೆಕ್ನಿಕಲ್ ಕ್ಲಿಯರೆನ್ಸ್ ಸಿಕ್ಕಿಲ್ಲ ಎಂದು ಉತ್ತರದಲ್ಲಿ ಹೇಳಿದ್ದೀರಿ. ಇತ್ತೀಚೆಗೆ ಟೆಕ್ನಿಕಲ್ ಕ್ಲಿಯರೆನ್ಸ್ ದೊರಕಿಸಿಕೊಳ್ಳುವುದಕ್ಕೆ ಸಾಧ್ಯವಾಗಲಿಲ್ಲವೇ ?

ಶ್ರೀ ಎಸ್. ನಿಜಲಿಂಗಪ್ಪ.—ಅದು ಬರುತ್ತದೆ. ನಾವೇನೂ ಕೊಂದರೆಪಡಬೇಕಾಗಿಲ್ಲ.

ಶ್ರೀ ಬಿ. ಬೈರಪ್ಪಾಜಿ.—ಸುಮಾರು 16 ಕೋಟಿ ಟಿಲ್ಲರೆ ಅಂದಾಜು ಏನು ತಯಾರು ಮಾಡಿಸಿದ್ದಾರೆಯೋ ಆ ಅಂದಾಜು ಪ್ರಕಾರ ತುಮಕೂರು ಜಿಲ್ಲೆ, ತಿಪಟೂರು, ಚಿತ್ರದುರ್ಗ, ಕೋಲಾರ್, ಮಂಡ್ಯ ಜಿಲ್ಲೆ, ನಲಮಂಗಲ ತಾಲ್ಲೂಕು ಇವುಗಳಿಗೆ ಕೂಡಾ ಕೊಡುವ ಒಂದು ವ್ಯವಸ್ಥೆ ಮಾಡಿತ್ತು. ಆ ಅಂದಾಜನ್ನು ಕೈಬಿಟ್ಟು ಈಚೆಗೆ ಕೇವಲ 2 ತಾಲ್ಲೂಕುಗಳಾದ ಚನ್ನರಾಯಪಟ್ಟಣ ಮತ್ತು ಹೊಳೆನರಸೀಪುರದಲ್ಲಿ 2 ಸಾವಿರ ಎಕರೆಗೆ ಮಾತ್ರ ನೀರು ಕೊಡುವ ಅಂದಾಜು ತಯಾರು ಮಾಡಿಸಿದ್ದೀರಿ. ಇದಕ್ಕೆ ಕಾರಣವೇನು ಸ್ವಾಮಿ ? ಈ ರೀತಿ ಪಕ್ಷಪಾತ ತೋರಿಸುವುದರಿಂದ ತಾವು ಒಂದು ಲಕ್ಷ ಎಕರೆ ಸಾಗಿಗೆ ತರಬಾರದಂತೆ ನಿರ್ಲಕ್ಷಿಸಿದ ಹಾಗೆ ಆಗುವುದಿಲ್ಲವೇ ? 16 ಕೋಟಿ ಖರ್ಚುಮಾಡುವುದಕ್ಕೆ ಏನು ಯೋಚನೆ ಮಾಡುತ್ತೀರಿ ?

ಶ್ರೀ ಎಸ್. ನಿಜಲಿಂಗಪ್ಪ.—ಮಾನ್ಯ ಸದಸ್ಯರು ಬಹುಶಃ ಏನು ತಿಳಿದುಕೊಂಡಿದ್ದಾರೆಂದು ನನಗೆ ಗೊತ್ತಾಗುವುದಿಲ್ಲ. ಎರಡು ಹಂತಗಳಲ್ಲಿ ಈ ಕೆಲಸ ಆಗತಕ್ಕದ್ದು. ಮೊದಲನೆಯ ಹಂತ 21.7 ಟಿ. ಎಮ್. ಸಿ. ನೀರು ಉಪಯೋಗಿಸಿ ಒಂದು ಲಕ್ಷ ಎಕರೆ ಸಾಗಿಗೆ ಬರುತ್ತದೆ. ಹಾಸನ, ಮೈಸೂರು, ಮಂಡ್ಯ ಜಿಲ್ಲೆಗಳಲ್ಲಿಯೂ, ಹಾಸನ, ಅರಕಲಗೂಡು, ಚನ್ನರಾಯಪಟ್ಟಣ, ಕೃಷ್ಣರಾಜಪೇಟೆ ಮತ್ತು ಪಾಂಡವಪುರ ತಾಲ್ಲೂಕುಗಳಲ್ಲಿ ಒಂದು ಲಕ್ಷ ಎಕರೆ ಸಾಗು ಆಗುತ್ತದೆ. 2ನೆಯ ಹಂತದಲ್ಲಿ ಒಂದು ಟನ್ನೆಲ್ ಹೊಡೆದು ಆದರಿಂದ 45 ಸಾವಿರ ಎಕರೆ ಅರಕಲಗೂಡು, ಹೊಳೆನರಸೀಪುರ, ಕೆ. ಆರ್. ನಗರ ಮತ್ತು ಕೃಷ್ಣರಾಜಪೇಟೆ ತಾಲ್ಲೂಕುಗಳಲ್ಲಿ ಸಾಗಿಗೆ ಬರುತ್ತದೆ. ಆದರ್ಶ

ಯಾರಿಗೂ ತೊಂದರೆ ಮಾಡುವ ಅಥವಾ ಪಕ್ಷಪಾತದ ಪ್ರಶ್ನೆಯೇ ಏಳುವುದಿಲ್ಲ. ಅವರು ಬರೇ ಊಹೆ ಮಾಡುತ್ತಿದ್ದಾರೆ ಎಂದು ಕಾಣುತ್ತದೆ.

ಶ್ರೀ ಟಿ. ಎನ್. ಮಾದಪ್ಪ ಗೌಡ.—ಈಗ ಗೋರೂರು ಅಣೆಕಟ್ಟಿನಲ್ಲಿ ಎಷ್ಟು ನೀರು ನಿಲ್ಲುತ್ತದೆ?

ಶ್ರೀ ಎಸ್. ನಿಜಲಿಂಗಪ್ಪ.—ನಾನು ಮೊದಲೇ ಹೇಳಿದಂತೆ ಮೊದಲಿನ ಹಂತದಲ್ಲಿ 21.7 ಅಥವಾ ಸುಮಾರು 22 ಟಿ. ಎಂ. ಸಿ. ವಾಟರ್, ಅನಂತರ ಎಲ್ಲಾ ಒಟ್ಟು 30 ಟಿ. ಎಂ. ಸಿ. ವಾಟರ್ ಇರುತ್ತದೆ.

ಶ್ರೀ ಎಚ್. ಆರ್. ಕೇಶವ ಮೂರ್ತಿ.—ಈ ಯೋಜನೆಯನ್ನು 1960ರಲ್ಲಿ ಮೊದಲು ಮಾಡಿ ಈಗ್ಗೆ 5 ವರ್ಷಗಳಿಂದ 85 ಸಾವಿರ ಚಿಲ್ಲರೆ ರೂಪಾಯಿಗಳನ್ನು ಖರ್ಚುಮಾಡಿದ್ದಾರೆ. ಅಂದಮೇಲೆ ಇದನ್ನು 1972ರಲ್ಲಿ ಮುಗಿಸಬೇಕಾಗುತ್ತದೆ. ಆಮೇಲೆ ಆಂಧ್ರದವರು ತುಂಬ ತರಲೆಮಾಡುತ್ತಾರೆ, ಇಷ್ಟು ನಿಧಾನವಾಗಿ ಹೋದರೆ ಈ ಯೋಜನೆ ಮುಗಿಸುವುದಕ್ಕೆ ಸಾಧ್ಯವೇ? ಆಂಧ್ರದವರಿಂದ ಯಾವ ರೀತಿಯಲ್ಲಿ ತೊಂದರೆ ಬಾರದೇ ಇರುವ ಹಾಗೆ ಲಿಮಿಟೆಡ್ ಪೀರಿಯಡ್ಡಿನಲ್ಲಿ ಇದನ್ನು ಮುಗಿಸುತ್ತೀರಾ?

ಶ್ರೀ ಎಸ್. ನಿಜಲಿಂಗಪ್ಪ.—ಆಂಧ್ರದವರಿಂದ ತೊಂದರೆ ಬರುವುದಿಲ್ಲ.

ಶ್ರೀ ಕೆ. ಎಸ್. ಸೂರ್ಯನಾರಾಯಣ ರಾವ್.—ಈ ಯೋಜನೆಯನ್ನು ಕಡೆಯ ಪಕ್ಷ ನಾಲ್ಕನೆಯ ಪಂಚವಾರ್ಷಿಕ ಯೋಜನೆಯಲ್ಲಿ ಷುರು ಮಾಡುವುದಕ್ಕೆ ಸಾಧ್ಯವಾಗುವಂತೆ ಪ್ರಯತ್ನಗಳು ನಡೆದಿವೆಯೇ?

ಶ್ರೀ ಎಸ್. ನಿಜಲಿಂಗಪ್ಪ.—ಈಗಾಗಲೇ ಷುರುವಾಗಿದೆ. ನಾಲ್ಕನೆಯ ಪಂಚವಾರ್ಷಿಕ ಯೋಜನೆಯಲ್ಲಿ ಸಾಧ್ಯವಾದರೆ ಅದು ಮುಗಿಯುವುದರೊಳಗೆ ಈ ಯೋಜನೆಯನ್ನು ಮುಗಿಸಬೇಕೆಂದು ಸರ್ಕಾರದ ಭಾವನೆ, ಅಭಿಪ್ರಾಯ, ನಂಬಿಕೆ.

ಶ್ರೀ ಟಿ. ಎನ್. ಮಾದಪ್ಪ ಗೌಡ.—ಈಗ ಹಾಲಿ ಗೊರೂರು ಅಣೆಕಟ್ಟನ್ನು ಕಟ್ಟುವುದು ಸಮುದ್ರಮಟ್ಟಕ್ಕೆ ಎಷ್ಟು ಅಡಿ ಎತ್ತರದಲ್ಲಿದೆ?

ಶ್ರೀ ಎಸ್. ನಿಜಲಿಂಗಪ್ಪ.—ಅದು ಎಷ್ಟು ಅಡಿ ಎತ್ತರದಲ್ಲಿದೆ ಎಂಬ ರೆಕ್ಕಾಚಾರ ನೋಡಿ ಕೊಂಡು ಹೇಳಬೇಕಾಗಿದೆ. ಆಮೇಲೆ ತಿಳಿಸುತ್ತೇನೆ.

ಶ್ರೀ ಬಿ. ಬೈರಪ್ಪಾಜಿ.—ಎರಡನೆಯ ಹಂತದಲ್ಲಿ ನಮ್ಮ ಜಿಲ್ಲೆಗೆ ಹಾಗೂ ಮಂಡ್ಯ ಜಿಲ್ಲೆಯ ನಾಗಮಂಗಲ ತಾಲ್ಲೂಕಿಗೂ ನೀರಾವರಿಗಾಗಿ ನೀರು ಕೊಡುತ್ತಾರೆಂದು ನಾವು ತಿಳಿದುಕೊಂಡಿದ್ದೆವು. ಮಾನ್ಯ ಮುಖ್ಯಮಂತ್ರಿಗಳನ್ನು ಕಂಡಿದ್ದಾಗ ಈ ವಿಚಾರವನ್ನು ಮನವಿಗಳ ಮೂಲಕ ತಿಳಿಸಿದ್ದೇವೆ. ಈಗಲೂ ಮಾನ್ಯ ಮುಖ್ಯ ಮಂತ್ರಿಗಳು ಆ ಬಗ್ಗೆ ಪಕ್ಷಪಾತವೇನೂ ತೋರುತ್ತಾ ಇಲ್ಲ. ಅದಕ್ಕೆ ಸರಿಯಾದ ರೀತಿಯಲ್ಲಿ ಇನ್‌ವೆಸ್ಟಿಗೇಷನ್ ನಡೆಸಿದೆ ತುಮಕೂರು ಜಿಲ್ಲೆಗೆ ನೀರು ಬರುವುದಿಲ್ಲವೆಂದು ತಜ್ಞರು ಅಭಿಪ್ರಾಯಪಟ್ಟಿರುವುದು ಸರಿಯಾಗಿಲ್ಲವೆಂದು ನಾನು ತಿಳಿದುಕೊಂಡಿದ್ದೇನೆ. ಆದರಿಂದ ಮತ್ತೆ ಮಾನ್ಯ ಮುಖ್ಯಮಂತ್ರಿಗಳು ಈ ಯೋಜನೆಯನ್ನು ರಿಸರ್ವೆ ಮಾಡಿಸಿ ತುಮಕೂರು ಜಿಲ್ಲೆಗೆ ನೀರು ಕೊಡುವುದಕ್ಕೆ ಸೂತ್ರ ವಿಚಾರ ಮಾಡುತ್ತಾರೆಯೇ?

ಶ್ರೀ ಎಸ್. ನಿಜಲಿಂಗಪ್ಪ.—ಈ ಪ್ರಶ್ನೆಯಲ್ಲಿ ತುಮಕೂರು, ಹಾಸನ, ಮೈಸೂರು ಜಿಲ್ಲೆಗಳು ಬರುವುದಿಲ್ಲ. ಯಾವ ಪ್ರದೇಶಕ್ಕೆ ನೀರು ಸೇರುತ್ತದೋ ಅದು ಎಲ್ಲಾದರೂ ಸೇರಬಹುದು, ಸಾಧ್ಯವಾದರೆ ಎಷ್ಟು ನೀರನ್ನು ನಿಲ್ಲಿಸಿ ಅದರಿಂದ ಎಷ್ಟು ಪ್ರದೇಶ ಸಾಗುವಳಿಯಾಗುತ್ತದೋ ಅದನ್ನು ಕೊಡಬಹುದು. ನೀರು ಎಲ್ಲಿ ನಿಲ್ಲುತ್ತದೋ, ಎಲ್ಲಿ ಹರಿಯುತ್ತದೋ ಅಲ್ಲಿಗೆ ಅನುಕೂಲವಾಗುತ್ತದೆ. ತುಮಕೂರು ಜಿಲ್ಲೆಗೆ ಬರಬೇಕೆಂದು ಕೇಳುತ್ತಿದ್ದಾರೆ. ನಾವೂ ಹೇಳುತ್ತಿದ್ದೇವೆ. ಅದು ಬರುತ್ತದೋ ಇಲ್ಲವೋ ನನಗೆ ಅನುಮಾನವಿದೆ. ಪುನಃ ಅದನ್ನು ಪರಿಶೀಲನೆ ಮಾಡುತ್ತೇವೆ.

ಶ್ರೀ ಎಚ್. ಡಿ. ಜೇವೇಗೌಡ.—ಈ ಯೋಜನೆಗೆ ಪ್ರಿಲಿಮಿನರಿ ಅಂದಾಜು ಮಾಡಲು ಎಷ್ಟು ಮೊಬಲಗು ಮಂಜೂರು ಮಾಡಿದೆ, ಅದನ್ನು ಕಾರ್ಯಗತಮಾಡುವುದಕ್ಕೆ ರೆಗ್ಯುಲರ್ ಸಬ್‌ಡಿವಿಷನ್ ಮಾಡುವುದಕ್ಕೆ ಸರ್ಕಾರಕ್ಕೆ ಇರತಕ್ಕ ಆತಂಕವೇನು?

ಶ್ರೀ ಎಸ್. ನಿಜಲಿಂಗಪ್ಪ.—ಅದಕ್ಕೆ ಕೆಲವು ದಿವಸಗಳಾದರೂ ಬೇಕಾಗುತ್ತದೆ. ಅದನ್ನು ಕೂಡಲೇ ಮಾಡುವುದಕ್ಕಾಗುವುದಿಲ್ಲ. ಈಗಾಗಲೇ ಅವನ್ನೆಲ್ಲಾ ಚೆನ್ನಾಗಿ ಆಲೋಚನೆ ಮಾಡಿ ಮಾಡಿದ್ದು ಆಗಿದೆ.

ಶ್ರೀ ಎಸ್. ಶಿವಪ್ಪ.—ಮಾನ್ಯ ಮುಖ್ಯಮಂತ್ರಿಗಳು ಈ ಪ್ರಾಜೆಕ್ಟಿನ ಅಸಿಭಾರ ಶಿಲಾ ಮಹೋತ್ಸವವನ್ನು ಮಾಡಿ ಬಂದು ಸುಮಾರು ಒಂದು ವರ್ಷ ಆಗಿದೆ. ಒಂದು ವರ್ಷಕ್ಕೆ ಸುಮಾರು 84 ಸಾವಿರ ರೂಪಾಯಿಗಳನ್ನು ಖರ್ಚುಮಾಡುತ್ತಿದ್ದಾರೆ. ಇದೇ ರೀತಿಯಲ್ಲಿ ಇವರು ಖರ್ಚುಮಾಡಿದರೆ ಈ ನಮ್ಮ ಯೋಜನೆ ಮುಗಿಯಬೇಕಾದರೆ ಸುಮಾರು 10-12 ವರ್ಷಗಳಾದರೂ ಆಗಬಹುದು. ಆದ್ದರಿಂದ ನಾಲ್ಕನೇ ಪಂಚವಾರ್ಷಿಕ ಯೋಜನೆಯಲ್ಲಾದರೂ ಅದನ್ನು ಮುಗಿಸಬೇಕೆಂಬ ದೃಷ್ಟಿ

(ಶ್ರೀ ಎಸ್. ಶಿವಪ್ಪ)

ಯಿಂದ ಕೂಡಲೇ ಹೆಚ್ಚು ಹಣವನ್ನು ಒಡಗಿಸಿ ಅಲ್ಲಿಗೆ ಬೇಕಾದಂಥ ಇಂಜನಿಯರುಗಳು ಹಾಗೂ ಸಿಬ್ಬಂದಿಯನ್ನು ಮುಂಜೂರುಮಾಡುವುದಕ್ಕೆ ಸರ್ಕಾರದವರು ತೀವ್ರ ಕ್ರಮವನ್ನು ತೆಗೆದುಕೊಳ್ಳುತ್ತಾರೆಯೇ?

ಶ್ರೀ ಎಸ್. ನಿಜಲಿಂಗಪ್ಪ.—ಮಾನ್ಯ ಸದಸ್ಯರ ಅಭಿಪ್ರಾಯವೇನೋ ಒಳ್ಳೆಯದು. ಆದರೆ ಅದನ್ನು ಇಲ್ಲಿ ಅನ್ವಯ ಮಾಡತಕ್ಕದ್ದಲ್ಲ. 6 ವರ್ಷಗಳಿಗೆ 10 ರೂಪಾಯಿಯಾದರೆ 60 ವರ್ಷಗಳಿಗೆ 100 ರೂಪಾಯಿಗಳೆಂದು ಹೇಳುವುದು ಸುಲಭವಲ್ಲ. ಇದನ್ನು 5-6 ವರ್ಷಗಳೊಳಗೆ ಮುಗಿಸ ಬೇಕೆಂದು ಸರ್ಕಾರದ ತೀವ್ರ ಉದ್ದೇಶವಿದೆ. ಆ ಒಂದು ಉದ್ದೇಶದಲ್ಲಿ ಯಾರಿಗೂ ಅಪನಂಬಿಕೆ ಬೇಡ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಮರಾಮತ್ತು ಇರಾಖೆಗೆ 120 ಕೋಟಿ ರೂಪಾಯಿಗಳ ಕೆಲವು ಪ್ಲಾನುಗಳನ್ನು ತೆಗೆದುಕೊಳ್ಳಬೇಕೆಂದು ಹೇಳಿದ್ದಾರೆ. ಈ ಪ್ರಾಜೆಕ್ಟಿಗೆ ಮುಂದಿನ ಫೈನಾನ್ ಷಿಯರ್ ಇಯರ್ ಎಂದಿಗೆ ಎಷ್ಟು ಹಣ ಖರ್ಚುಮಾಡಬೇಕೆಂದು ಸರ್ಕಾರ ಯೋಜನೆ ಮಾಡಿದೆ?

ಶ್ರೀ ಎಸ್. ನಿಜಲಿಂಗಪ್ಪ.—120 ಕೋಟಿ ರೂಪಾಯಿಗಳಿಗೂ ಇದಕ್ಕೂ ಏನೂ ಸಂಬಂಧವಿಲ್ಲ. 120 ಕೋಟಿ ರೂಪಾಯಿಗಳ ದೊಡ್ಡ ಯೋಜನೆ ಕೃಷ್ಣಾನದಿಗೆ ಸಂಬಂಧಪಟ್ಟದ್ದೆಂದು ಮಾನ್ಯ ಸದಸ್ಯರು ಊಹಿಸಿರಬಹುದು. ಅದನ್ನೂ ನಾವು ಒಂದಾಗಿಸಬೇಕು. ಇದಕ್ಕೆ 5 ಲಕ್ಷ ರೂಪಾಯಿಗಳನ್ನು ತೆಗೆದಿಟ್ಟಿದ್ದೇವೆ. ಆದರೆ ಅಷ್ಟೇ ಖರ್ಚುಮಾಡಬೇಕೆಂದಿಲ್ಲ, ಎಷ್ಟುಬೇಕೋ ಅಷ್ಟನ್ನು ಖರ್ಚುಮಾಡ ಬಹುದು.

ಶ್ರೀ ಟಿ. ಎಸ್. ಮಾದಪ್ಪ ಗೌಡ.—ಸೊರೂರು ನೀರು ನಾಗಮಂಗಲಕ್ಕೂ ಬರಬೇಕೆಂದು ಹೇಳಲು ಕೆಲವು ಪುಢಾರಿಗಳು ತಮ್ಮನ್ನು ನೋಡಬೇಕೆಂದು ಇದ್ದಾರೆ. ಬೇಕಾದಷ್ಟು ಈ ಬಗ್ಗೆ ಉತ್ತರಗಳು ಸಹಿಯಾಗುತ್ತಿವೆ. ಆದ್ದರಿಂದ ಆದಷ್ಟುಬೇಗ ಸರ್ಕಾರದವರು ಈ ನೀರು ಎಲ್ಲೆಲ್ಲಿ ಬರುತ್ತದೆ, ಎಲ್ಲೆಲ್ಲಿ ಬರುವುದಿಲ್ಲವೆಂದು ಒಂದು ಹೇಳಿಕೆಯನ್ನು ಕೊಡಿಸುವುದಕ್ಕೆ ತಕ್ಕ ಏರ್ಪಾಡನ್ನು ಮಾಡುತ್ತಾರೆಯೇ?

ಶ್ರೀ ಎಸ್. ನಿಜಲಿಂಗಪ್ಪ.—ಅದನ್ನು ಪ್ರಕಟಣೆ ಮಾಡುವ ಅವಶ್ಯಕತೆ ಇಲ್ಲ. ಅದು ಸರಿಯೂ ಆಲ್ಲ. ಎಲ್ಲೆಲ್ಲಿ ನೀರು ಬರುತ್ತದೆಂಬುದನ್ನು ನಮ್ಮ ಇಂಜನಿಯರುಗಳು ಯಾವ ಪಕ್ಷಕ್ಕೂ ಸೇರಿಲ್ಲದೇ ಇರುವುದರಿಂದ ಚೆನ್ನಾಗಿ ಕಂಡುಹಿಡಿದಿದ್ದಾರೆ. ಅಂಥಾದ್ದನ್ನು ಪ್ರಕಟಣೆ ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ. ಮಾನ್ಯ ಸದಸ್ಯರು ಒಂದು ಸಮ್ಮೇಳನವನ್ನು ಈ ವಿಚಾರದಲ್ಲಿ ಮಾಡಬಹುದು, ಆದರೆ ಎಲ್ಲಿ ಸಾಧ್ಯವೋ ಅಲ್ಲಿ ಕೊಡುತ್ತೇವೆ.

ಶ್ರೀ ಎಚ್. ಆರ್. ಕೇಶವಮೂರ್ತಿ.—ಈಗ ನಾವಾರು 6-7-8 ತಿಂಗಳುಗಳಿಂದ ಅಲ್ಲಿ ಆಫೀ ಸರುಗಳ ಮತ್ತು ನೌಕರರುಗಳ ಕ್ವಾರ್ಟರ್ಸುಗಳನ್ನು ಕಟ್ಟಿಸಬೇಕೆಂದು ಉತ್ಸಾಹದಿಂದ ಚೆಂಡರು ಗಳನ್ನು ಕಾಲ್ ಷೂರ್ ಮಾಡಿ ಈಗ ಆ ಕೆಲಸವನ್ನೇ ಸರ್ಕಾರದವರು ನಿಲ್ಲಿಸಿದ್ದಾರೆ. ಅದಕ್ಕೆ ಕಾರಣವೇನು?

ಶ್ರೀ ಎಸ್. ನಿಜಲಿಂಗಪ್ಪ.—ಅಲ್ಲಿ ಜಾಗ ಬೇಕಾಗಿತ್ತು. ಮೊದಲು ಜಾಗ ಸಿಕ್ಕಿದ್ದುದು ಕೆಲವು ಭಾಗ ಅಕ್ವಿಸಿಷನ್ ಮಾಡಬೇಕಾಯಿತು. ಅದ್ದರಿಂದ ಈಗ ಮಾನ್ಯ ಸದಸ್ಯರು ಸ್ವಲ್ಪಭಾಗವನ್ನಾ ದರೂ ರಾಜಿ ಮಾಡಿದ್ದೇವೆಂದು ಬಗೆದು ಕಳುಹಿಸಿದರೆ ಆಗ ಅದನ್ನು ವಿಚಾರಮಾಡಿ ಕಟ್ಟಿಸಬಹುದು.

ಶ್ರೀ ಎಸ್. ಶಿವಪ್ಪ.—ಹೇಮಾವತಿ ಯೋಜನೆಗೆ ಸೆಕೆಂಡ್ ಸ್ಟೇಜಿನಲ್ಲಿ ಒಂದು ಟನಲ್ ಮಾಡಿ ಕಾವೇರಿ ಬೇಸಿನ್ನಿಗೆ ತಿರುಗಿಸಿದ್ದಾರೆ. ಆದ್ದರಿಂದ ಈ ಯೋಜನೆಯನ್ನೂ ಸಹ ಅದೇ ರೀತಿ ತುಮ ಕೂರು ಜಿಲ್ಲೆ ಮತ್ತು ನಾಗಮಂಗಲ ತಾಲ್ಲೂಕುಗಳಿಗೆ ತೆಗೆದುಕೊಂಡು ಹೋಗುವ ಯೋಚನೆ ಇದೆ. ಆದನ್ನು ಇತ್ತಕಡೆಗೆ ಅಂದರೆ ಕಾವೇರಿ ಬಯಿ ತಿರುಗಿಸುವುದಕ್ಕೆ ಬದಲಾಗಿ ಎಲ್ಲಿ ಹೆಚ್ಚು ನೀರಾವರಿ ಇಲ್ಲವೋ ಅಲ್ಲಿ ತಕ್ಕ ಸೌಕರ್ಯವನ್ನು ಕೊಡುವುದಕ್ಕೆ ದಯವಿಟ್ಟು ಪರಿಶೀಲನೆ ಮಾಡುತ್ತೀರಾ?

ಶ್ರೀ ಎಸ್. ನಿಜಲಿಂಗಪ್ಪ.—ಪರಿಶೀಲನೆ ಮಾಡುತ್ತೇವೆ.